




'ಚೈಲ್ಡ್ ಲೈನ್' ಬಗ್ಗೆ ಹೇಳಿದ್ದರಿಂದ ಆ ನಂಬರ್‌ಗೆ ಫೋನ್ ಮಾಡಿ ತನ್ನ ಕಷ್ಟಗಳನ್ನು ಹೇಳಿಕೊಳ್ಳುವ ಪ್ರಯತ್ನ ಮಾಡಿದ್ದಳು. ಈ ಪ್ರಕರಣದ ಬೆನ್ನು ಹತ್ತಿ ಹೋದಾಗ ಗೊತ್ತಾದದ್ದು, ಮಗಳ ಮೇಲಿನ ಮೋಹದಿಂದ ತಂದೆಯಾದವನು ಆಕೆಯನ್ನು ತನ್ನ ಸುಪರ್ದಿಗೆ ನೀಡುವಂತೆ ಕೇಳಿರಲಿಲ್ಲ. ಬದಲಾಗಿ ಇಬ್ಬರೂ ಮಕ್ಕಳನ್ನು ಪತ್ನಿಯ ವಶಕ್ಕೇ ಕೊಟ್ಟರೆ, ತನ್ನ ಆಸ್ತಿಯೆಲ್ಲವೂ ಕೈ ಜಾರಿ ಹೋದೀತು ಎಂಬ ಭಯದಿಂದ ಒಬ್ಬಳು ಮಗಳನ್ನು ತನ್ನ ಸುಪರ್ದಿಗೆ ಕೊಡುವಂತೆ ಕೋರಿದ್ದನಷ್ಟೆ. ಈ ಪ್ರಕರಣದಲ್ಲಿನ ಕ್ರೌರ್ಯ ಸಂಬಂಧಗಳ ಬಗ್ಗೆ ಅಪನಂಬಿಕೆ ಹುಟ್ಟಿಸುವಂತಿದೆ.

ಶಿವಮೊಗ್ಗದ 'ಮಾನಸ ಎಜುಕೇಷನಲ್ ಫೌಂಡೇಷನ್ ಫಾರ್ ಮೆಂಟಲ್ ಹೆಲ್ತ್'ನ ಶೈಕ್ಷಣಿಕ ನಿರ್ದೇಶಕಿ ಡಾ. ಪ್ರೀತಿ ಪೈ ಶಾನುಭಾಗ್ ಅವರೂ, ಮಕ್ಕಳ ಮನಸ್ಥಿತಿಯನ್ನು ಪಾಲಕರು ಕಾಳಜಿ ಮಾಡುವುದು ಬಹಳ ಮುಖ್ಯ ಎಂದು ಒತ್ತಿಹೇಳುತ್ತಾರೆ.

## ಅಪ್ಪ-ಅಮ್ಮನಿಗೆ ಬೇಕು ಸಮಾಲೋಚನೆ

'ಮಕ್ಕಳು ಶಾಲೆಯಲ್ಲಿ ಖಿನ್ನರಾಗಿದ್ದಾಗ ಅವರನ್ನು ಸಮಾಲೋಚಕರ ಬಳಿಗೆ ಕರೆದೊಯ್ಯುವಂತೆ ಸಾಮಾನ್ಯವಾಗಿ ಸಲಹೆ ಮಾಡಲಾಗುತ್ತದೆ. ಆದರೆ ಎಷ್ಟೋ ಸಂದರ್ಭಗಳಲ್ಲಿ ಮಕ್ಕಳು ಖಿನ್ನರಾಗಿದ್ದರೆ ಸಮಾಲೋಚಕರನ್ನು ಭೇಟಿಯಾಗಬೇಕಾದವರು ಅವರ ಅಪ್ಪ ಅಮ್ಮ. ದಂಪತಿಯ ನಡುವಿನ ಸಮಸ್ಯೆಯ ಪರಿಣಾಮವಾಗಿಯೇ ಮಕ್ಕಳು ಮ್ಲಾನವದನರಾಗಿಯೋ ಅಥವಾ ಅತಿ ಚಟುವಟಿಕೆಯಿಂದಲೋ ಇರುವುದುಂಟು. ಆದ್ದರಿಂದಲೇ ದಂಪತಿ ನಡುವಿನ ಜಗಳಗಳಿಗೆ ಕಾರಣಗಳನ್ನು ಹುಡುಕುವುದು ಅನಿವಾರ್ಯವಾಗುತ್ತದೆ. ಅದರತ್ತ ಗಮನ ಹರಿಸಿದಾಗ ಮದುವೆ ಕುರಿತು ನಮ್ಮ ಸಾಮಾಜಿಕ ಚೌಕಟ್ಟುಗಳು ಹೇಗಿವೆ ಎಂಬುದನ್ನೂ ಗಮನಿಸಬೇಕಾಗುತ್ತದೆ' ಎಂದು ಡಾ. ಪ್ರೀತಿ ಹೇಳುತ್ತಾರೆ.

ಆಸ್ತಿಪಾಸ್ತಿಗಾಗಿ ಆಗುವ ಜಗಳಕ್ಕಿಂತಲೂ